Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC Civil Judge

## Previous Year Paper

### Mains (Law Paper-I) 30 Sept, 2021

Teachingninja.in

# HIGH COURT OF KARNATAKA
## ಕರ್ನಾಟಕ ಉಚ್ಚ ನ್ಯಾಯಾಲಯ

# CIVIL JUDGE MAIN WRITTEN EXAMINATION 2021
## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2021

## LAW PAPER I
## ಕಾನೂನು ಪತ್ರಿಕೆ – I

Date: 30.09.2021 — Max Marks: 100
ದಿನಾಂಕ: 30.09.2021 — ಗರಿಷ್ಠ ಅಂಕಗಳು: 100

Time: 2.30 PM to 5.30 PM
ಸಮಯ: ಮಧ್ಯಾಹ್ನ 2.30 ರಿಂದ 5.30 ಗಂಟೆ

**Instructions:**
**ಸೂಚನೆಗಳು:**

1. Option is given to the candidates to write answers either in English or in Kannada

ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, the questions as framed in English language shall prevail.

ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

Teachingninja.in

## Part I
ಭಾಗ – 1

### The Code of Civil Procedure, 1908 and Principles of Pleadings
ದಿವಾಣಿ ಪ್ರಕ್ರಿಯಾ ಸಂಹಿತೆ, 1908 ಮತ್ತು ದಾವಾ ಪ್ರತಿದಾವಾ ಪತ್ರಗಳ ತತ್ವಗಳು

**1. Write short notes on Any Two of the following subjects with reference to Relevant Provisions of Law**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳ ಬಗ್ಗೆ ಅದಕ್ಕೆ ಸಂಬಂಧಪಟ್ಟಂತ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ. **5x 2=10**

a) Mandatory requirements for filing the suit against Government and Public Officers.

ಸರ್ಕಾರ ಮತ್ತು ಸಾರ್ವಜನಿಕ ಅಧಿಕಾರಿಗಳ ವಿರುದ್ಧ ದಾವಾವನ್ನು ಸಲ್ಲಿಸಲು ಬೇಕಾಗಿರುವ ಕಡ್ಡಾಯ ಅವಶ್ಯಕತೆಗಳು

b) Procedures to be followed while recording the compromise in:

i) a representative suit.
ii) a suit where minor is one of the parties.

i) ಪ್ರತಿನಿದಿತ್ವ ದಾವೆಯಲ್ಲಿ.
ii) ಅಪ್ರಾಪ್ತ ವಯಸ್ಕ ದಾವೆಯಲ್ಲಿ ಓರ್ವ ಪಕ್ಷಗಾರರಾಗಿದ್ದಾಗ.

ರಾಜಿಯನ್ನು ದಾಖಲು ಮಾಡುವ ಕಾಲಕ್ಕೆ ಅನುಸರಿಸಬೇಕಾದ ವಿಧಾನಗಳು.

c) Which specific provisions of the Code of Civil Procedure, 1908 have to be invoked under following circumstances:

i) To correct the clerical mistakes crept in the Judgment.

ii) To set aside the order of dismissal of suit for non appearance of plaintiff, when the suit is called on for hearing.

iii) To permit the decree holder to bid and purchase the property in Court sale.

iv) To set aside the abatement of suit for not bringing the legal heirs of the deceased plaintiff within time.

v) To produce the additional evidence before the Appellate Court.

Teachingninja.in

ಕೆಳಗಿನ ಸಂದರ್ಭಗಳಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಯಾವ ನಿರ್ದಿಷ್ಟ ನಿಭಂದನೆಗಳನ್ನು ಉಲ್ಲೇಖಿಸಬೇಕು:

i) ತೀರ್ಪಿನಲ್ಲಿ ಆಗಿರುವ ಕೈ ತಪ್ಪುಗಳನ್ನು ಸರಿಪಡಿಸಲು.

ii) ಸುನಾವಣೆಗೆ ದಾವೆಯನ್ನು ಕರೆದಾಗ ವಾದಿಯ ಗೈರು ಹಾಜರಿಗಾಗಿ ದಾವಾ ವಜಾಗೊಂಡ ಆದೇಶವನ್ನು ರದ್ದುಗೊಳಿಸಲು.

iii) ನ್ಯಾಯಾಲಯದ ಮಾರಾಟದಲ್ಲಿ ಆಸ್ತಿಗಾಗಿ ಸವಾಲು ಕೂಗಲು ಮತ್ತು ಖರೀದಿ ಮಾಡಲು ಡಿಕ್ರಿದಾರಕನಿಗೆ ಪರವಾನಿಗೆ ನೀಡಲು.

iv) ಮೃತ ವಾದಿಯ ಕಾನೂನುಬದ್ಧ ವಾರಸುದಾರರನ್ನು ನಿಗದಿತ ಸಮಯದೊಳಗೆ ಸೇರಿಸದ ಕಾರಣ ದಾವಾ ಕೊನೆಗೊಂಡಿರುವುದನ್ನು ರದ್ದು ಪಡಿಸಲು.

v) ಮೇಲ್ಮನವಿ ನ್ಯಾಯಲಯದ ಮುಂದೆ ಹೆಚ್ಚುವರಿ ಸಾಕ್ಷ್ಯವನ್ನು ಹಾಜರು ಪಡಿಸಲು.

**2. Answer <u>Any Two</u> of the following questions with reference to the <u>Relevant Provisions of Law</u>**

**ಈ ಕೆಳಗಿನವುಗಳ ಪೈಕಿ ಯಾವುದಾದರೂ <u>ಎರಡು ಪ್ರಶ್ನೆಗಳಿಗೆ</u> ಅದಕ್ಕೆ <u>ಸಂಬಂಧಪಟ್ಟಂತ ಕಾನೂನಿನ ನಿಭಂದನೆಗಳನ್ನು</u> ಉಲ್ಲೇಖಿಸಿ ಉತ್ತರ ಬರೆಯಿರಿ** **10 x 2=20**

a) Explain briefly about the Written Statement with Reference to following:

i) Pleading of new facts.

ii) Denial.

iii) Set-Off and Counter claim.

ಪ್ರತಿವಾದ ಪತ್ರದ ಬಗ್ಗೆ ಈ ಕೆಳಗಿನವುಗಳನ್ನು ಉಲ್ಲೇಖಿಸಿ ಸಂಕ್ಷಿಪ್ತವಾಗಿ ವಿವರಿಸಿ:

i) ಹೊಸ ಸಂಗತಿಗಳನ್ನು ವಾದಿಸುವುದು.

ii) ನಿರಾಕರಣೆ.

iii) ವಜಾವಟ್ಟು ಮತ್ತು ಎದುರು ಕ್ಲೇಮು.

b) Explain briefly about Issues with reference to following:

i) What is an Issue?

ii) Kinds of Issues.

iii) Materials from which Issues may be framed

Teachingninja.in

ವಿವಾದಾಂಶಗಳ ಬಗ್ಗೆ ಈ ಕೆಳಗಿನವುಗಳನ್ನು ಉಲ್ಲೇಖಿಸಿ ಸಂಕ್ಷಿಪ್ತವಾಗಿ ವಿವರಿಸಿ:

i) ವಿವಾದಾಂಶ ಎಂದರೆ ಏನು?

ii) ವಿವಾದಾಂಶಗಳ ವಿಧಗಳು.

iii) ಯಾವ ವಿಷಯಗಳ ಮೇಲಿಂದ ವಿವಾದಾಂಶಗಳನ್ನು ರೂಪಿಸಬಹುದು.

c) What are the principles governing the grant of temporary injunction? What procedures are to be followed while granting the exparte temporary injunction order?

ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಮಂಜೂರು ಮಾಡಲು ಇರುವ ತತ್ವಗಳು ಏನು? ಏಕಪಕ್ಷೀಯ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮಾಡುವಾಗ ಪಾಲಿಸಬೇಕಾದ ಪ್ರಕ್ರಿಯೆಗಳು ಏನು?

## Part II

## ಭಾಗ – 2

## The Code of Criminal Procedure, 1973

## ಅಪರಾಧ ಪ್ರಕ್ರಿಯಾ ಸಂಹಿತೆ, 1973

**3. Write short notes on Any Two of the following subjects with reference to Relevant Provisions of Law:**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳ ಬಗ್ಗೆ ಅವುಗಳಿಗೆ ಸಂಬಂಧಪಟ್ಟ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ: **5 x 2=10**

a) Statutory Bail.
ಶಾಸನಾತ್ಮಕ ಜಾಮೀನು.

b) Limitation for taking cognizance of offence.
ಅಪರಾಧದ ಸಂಜ್ಞೇಯನ್ನು ತೆಗೆದುಕೊಳ್ಳಲು ಕಾಲಪರಿಮಿತಿ.

c) Which specific provisions of the Code of Criminal Procedure 1973 have to be invoked under following circumstances:

i) To issue summons to any person to produce documents for the purpose of trial.

ii) To issue warrant to authorize any police officer to enter any place used for sale of stolen property.

iii) For recording the confession made to Judicial Magistrate in the course of an investigation.

Teachingninja.in

iv) To file additional charge sheet after conducting the further investigation.

v) To commit the case to the Court of Sessions after commencement of inquiry or trial by the Magistrate.

ಕೆಳಗಿನ ಸಂದರ್ಭಗಳಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಯಾವ ನಿರ್ದಿಷ್ಟ ನಿಭಂದನೆಗಳನ್ನು ಉಲ್ಲೇಖಿಸಬೇಕು:

i) ತನಿಖೆ ವಿಚಾರಣೆಗೆ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಯಾವುದೇ ವ್ಯಕ್ತಿಗೆ ಸಮನ್ಸ್ ನೀಡಲು.

ii) ಕಳವು ಮಾಲುಗಳನ್ನು ಮಾರಾಟ ಮಾಡಲು ಉಪಯೋಗಿಸಿದ ಯಾವುದೇ ಸ್ಥಳವನ್ನು ಪ್ರವೇಶಿಸಲು ಪೋಲೀಸ್ ಅಧಿಕಾರಿಗೆ ಅಧಿಕಾರ ಕೊಡುವ ವಾರಂಟನ್ನು ಜಾರಿಗೊಳಿಸಲು.

iii) ತನಿಖೆಯ ಹಂತದಲ್ಲಿ ನ್ಯಾಯಾಂಗ ದಂಡಾಧಿಕಾರಿಯವರ ಮುಂದೆ ತಪ್ಪೊಪಿಗೆ ಹೇಳಿಕೆಯನ್ನು ದಾಖಲು ಮಾಡಲು

iv) ಹೆಚ್ಚಿನ ತನಿಖೆಯನ್ನು ನಡೆಸಿ ಹೆಚ್ಚುವರಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು.

v) ವಿಚಾರಣೆ ಅಥವಾ ಆರೋಪಗಳ ವಿಚಾರಣೆ ಪ್ರಾರಂಭವಾದ ಬಳಿಕ ದಂಡಾಧಿಕಾರಿಯವರು ಪ್ರಕರಣವನ್ನು ಸತ್ರ ನ್ಯಾಯಾಲಯಕ್ಕೆ ಒಪ್ಪಿಸಲು.

**4. Answer Any Two of the following questions with reference to Relevant Provisions of Law.**

ಈ ಕೆಳಗಿನವುಗಳ ಪೈಕಿ ಎರಡು ಪ್ರಶ್ನೆಗಳಿಗೆ ಅವುಗಳಿಗೆ ಸಂಬಂಧಿಸಿದ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ಉತ್ತರಿಸಿರಿ. **10 x 2=20**

a) Briefly explain Charge with reference to following:
   i) Contents of charge.
   ii) Effect of errors in framing charge.
   iii) Alteration of charge.

ಆರೋಪದ ಬಗ್ಗೆ ಈ ಕೆಳಗಿನವುಗಳನ್ನು ಉಲ್ಲೇಖಿಸಿ ಸಂಕ್ಷಿಪ್ತವಾಗಿ ವಿವರಿಸಿ:
   i) ಆರೋಪದ ಒಳಾಂಶಗಳು.
   ii) ಆರೋಪಗಳನ್ನು ರೂಪಿಸುವಾಗ ಆದ ತಪ್ಪುಗಳ ಪರಿಣಾಮ.
   iii) ಆರೋಪದ ಬದಲಾವಣೆ.

b) Briefly explain the broad principles relating to grant of:
   i) Bail in bailable offences.
   ii) Bail in non-bailable offences.
   iii) Anticipatory bail.

Teachingninja.in

i) ಜಾಮೀನಿಯ ಅಪರಾಧಗಳಲ್ಲಿ ಜಾಮೀನು

ii) ಜಾಮೀನಿಯವಲ್ಲದ ಅಪರಾಧಗಳಲ್ಲಿ ಜಾಮೀನು

iii) ನಿರೀಕ್ಷಣಾ ಜಾಮೀನು

ನೀಡುವುದಕ್ಕೆ ಸಂಬಂಧಿಸಿದ ವಿಶಾಲ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ:

c) Describe the procedure to be followed by a Magistrate when a complaint is filed before him. When a complaint may be dismissed by the Magistrate?

ತನ್ನ ಮುಂದೆ ಫಿರ್ಯಾದಿಯನ್ನು ಸಲ್ಲಿಸಿದಾಗ ದಂಡಾಧಿಕಾರಿ ಅನುಸರಿಸಬೇಕಾದ ಕ್ರಮಗಳನ್ನು ವಿವರಿಸಿ. ದಂಡಾಧಿಕಾರಿಯವರು ಯಾವಾಗ ಫಿರ್ಯಾದಿಯನ್ನು ವಜಾಗೊಳಿಸಬಹುದು?

## Part III

## ಭಾಗ – 3

## The Indian Evidence Act, 1872

## ಭಾರತೀಯ ಸಾಕ್ಷ ಅಧಿನಿಯಮ, 1872

**5. Write short notes on Any Two of the following subjects with reference to Relevant Provisions of Law:**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳ ಬಗ್ಗೆ ಅವುಗಳಿಗೆ ಸಂಬಂಧಪಟ್ಟ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ಟಿಪ್ಪಣಿ ಬರೆಯಿರಿ: **5 x 2=10**

a) Presumption as to suicide by married woman.
ವಿವಾಹಿತ ಮಹಿಳೆಯ ಆತ್ಮಹತ್ಯೆಯ ಬಗ್ಗೆ ಪೂರ್ವಭಾವನೆ.

b) Special provisions relating to admissibility of electronic records.
ಎಲೆಕ್ಟ್ರಾನಿಕ್ ದಾಖಲಾತಿಗಳ ಸ್ವೀಕಾರಾರ್ಹತೆಗೆ ಸಂಬಂಧಿಸಿದ ವಿಶೇಷ ನಿಭಂದನೆಗಳು.

c) Dying Declaration.
ಮರಣಪೂರ್ವ ಹೇಳಿಕೆ.

**6. Answer Any One of the following questions with Relevant Provision of Law.**

ಈ ಕೆಳಗಿನವುಗಳ ಪೈಕಿ ಒಂದು ಪ್ರಶ್ನೆಗೆ ಅದಕ್ಕೆ ಸಂಬಂಧಿಸಿದ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ಉತ್ತರಿಸಿರಿ. **10 x 1=10**

a) Explain briefly about the relevancy of evidence of following witnesses:

i) Hostile witness.

ii) Expert witness.

iii) Child witness.

Teachingninja.in

ಈ ಕೆಳಗಿನ ಸಾಕ್ಷಿದಾರರ ಸಾಕ್ಷ್ಯದ ಪ್ರಸ್ತುತತೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ:

i) ಪ್ರತಿಕೂಲ ಸಾಕ್ಷಿ.
ii) ತಜ್ಞ ಸಾಕ್ಷಿ.
iii) ಮಗುವಿನ ಸಾಕ್ಷಿ.

b) Explain briefly the Burden of Proof with reference to following, with illustrations:

i) On whom burden of proof lies.
ii) Burden of proof as to particular fact.
iii) Burden of proving fact especially within knowledge.

ರುಜುವಾತಿನ ಭಾರವನ್ನು ಈ ಕೆಳಗಿನವುಗಳನ್ನು ಉಲ್ಲೇಖಿಸಿ ದೃಷ್ಟಾಂತಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ:

i) ರುಜುವಾತಿನ ಭಾರ ಯಾರ ಮೇಲೆ ಇರುತ್ತದೆ.
ii) ಒಂದು ನಿರ್ದಿಷ್ಟ ವಾಸ್ತವಿಕತೆಯ ಬಗ್ಗೆ ರುಜುವಾತಿನ ಭಾರ.
iii) ವಿಶೇಷತಃ ತನಗೆ ಗೊತ್ತಿರುವ ವಾಸ್ತವಿಕತೆಯನ್ನು ಸಾಬೀತು ಪಡಿಸುವ ಭಾರ.

## Part IV
## ಭಾಗ – 4
## The Constitution of India
## ಭಾರತ ಸಂವಿಧಾನ

**7. Write short notes on Any Two of the following subjects:**

ಈ ಕೆಳಗಿನವುಗಳ ಪೈಕಿ ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ:

**5 x 2=10**

a) Fundamental duties.
ಮೂಲಭೂತ ಕರ್ತವ್ಯಗಳು.

b) Directive Principles of State Policy.
ರಾಜ್ಯನೀತಿಯ ನಿರ್ದೇಶಕ ತತ್ವಗಳು.

c) Right of Freedom.
ಸ್ವಾತಂತ್ರ್ಯದ ಹಕ್ಕು

Teachingninja.in

**8. Answer <u>Any One</u> of the following questions.**

**ಈ ಕೆಳಗಿನವುಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಿರಿ.** **10 x 1=10**

a) Describe the procedure for carrying out amendment in the Constitution of India. Can Fundamental rights be amended?

ಭಾರತೀಯ ಸಂವಿಧಾನವನ್ನು ತಿದ್ದುಪಡಿ ಮಾಡುವ ಕ್ರಮಗಳನ್ನು ವಿವರಿಸಿ. ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡಬಹುದೇ?

b) Briefly state the legal principles involved in the following landmark judgments?

i) Navtej Singh Johar vs Union of India (2018) 10 SCC 1

ii) Shayara Bano vs Union of India and others (2017) 9 SCC 1

iii) Justice K.S.Puttaswamy (Retd) vs Union of India and others (2017) 10 SCC 1

iv) Indian Young Lawyers Association vs The State of Kerala (2019) 11 SCC 1

v) Common Cause ( A Regd. Society) vs Union of India and another (2018) 5 SCC 1

ಈ ಕೆಳಗಿನ ಮಹತ್ತರವಾದ ತೀರ್ಪುಗಳಲ್ಲಿ ಒಳಗೊಂಡಿರುವ ಕಾನೂನು ತತ್ವಗಳನ್ನು ಸಂಕ್ಷಿಪ್ತವಾಗಿ ತಿಳಿಸಿ:

i) ನವತೇಜ್ ಸಿಂಗ್ ಜೋಹರ್ ವಿರುದ್ದ ಯೂನಿಯನ್ ಆಫ್ ಇಂಡಿಯ (2018) 10 ಎಸ್.ಸಿ.ಸಿ. 1

ii) ಶಾಯರ ಬಾನು ವಿರುದ್ಧ ಯೂನಿಯನ್ ಆಫ್ ಇಂಡಿಯ ಮತ್ತು ಇತರರು (2017) 9 ಎಸ್.ಸಿ.ಸಿ. 1

iii) ನ್ಯಾಯಮೂರ್ತಿ ಕೆ.ಎಸ್.ಪುಟ್ಟಸ್ವಾಮಿ (ನಿವೃತ್ತ) ವಿರುದ್ಧ ಯೂನಿಯನ್ ಆಫ್ ಇಂಡಿಯ ಮತ್ತು ಇತರರು (2017) 10 ಎಸ್.ಸಿ.ಸಿ. 1

iv) ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್ ವಿರುದ್ಧ ಕೇರಳ ರಾಜ್ಯ (2019) 11 ಎಸ್.ಸಿ.ಸಿ. 1

v) ಕಾಮನ್ ಕಾಸ್ (ಒಂದು ನೊಂದಾಯಿತ ಸಂಸ್ಥೆ) ವಿರುದ್ದ ಯೂನಿಯನ್ ಆಫ್ ಇಂಡಿಯ ಮತ್ತು ಇನ್ನೊಬ್ಬರು (2018) 5 ಎಸ್.ಸಿ.ಸಿ. 1

******

Teachingninja.in